REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 | ಸಂಚಿಕೆ : 44 | 4 ಫೆಬ್ರವರಿ 2026 | ಬುಧವಾರ | ಪುಟಗಳು : 8 | ಬೆಲೆ : 2/-

## 2026-27ರ ಕೇಂದ್ರ ಬಜೆಟ್ : ಯುವಶಕ್ತಿ ಮತ್ತು ಮೂಲಸೌಕರ್ಯಕ್ಕೆ ಆದ್ಯತೆ



**ನವದೆಹಲಿ :** ದೇಶದ ಆರ್ಥಿಕ ಬೆಳವಣಿಗೆಗೆ ಹೊಸ ದಿಕ್ಕು ನೀಡುವ ಉದ್ದೇಶದೊಂದಿಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು 2026-27ನೇ ಹಣಕಾಸು ವರ್ಷದ ಕೇಂದ್ರ ಬಜೆಟ್ ಅನ್ನು ಫೆಬ್ರವರಿ 1ರಂದು ಸಂಸತ್ತಿನಲ್ಲಿ ಮಂಡಿಸಿದರು. ಇದು ಅವರ ಒಂಬತ್ತನೇ ನಿರಂತರ ಬಜೆಟ್ ಆಗಿದ್ದು, "ಯುವಶಕ್ತಿ ಚಾಲಿತ ವಿಕಸಿತ ಭಾರತ" ಎಂಬ ದೃಷ್ಟಿಕೋನವನ್ನು ಅವರು ದೇಶದ ಜನರ ಮುಂದಿಟ್ಟಿದ್ದಾರೆ.

**ರಾಜಸ್ವ ಕೊರತೆ ಶೇ.4.3 ಗುರಿ :** ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ರಾಜಸ್ವ ಕೊರತೆಯನ್ನು ಜಿಡಿಪಿ ಶೇ.4.3ಕ್ಕೆ ನಿಯಂತ್ರಿಸುವ ಗುರಿಯನ್ನು ಘೋಷಿಸಿದೆ. ಆರ್ಥಿಕ ಶಿಸ್ತನ್ನು ಕಾಪಾಡುತ್ತಲೇ ಬೆಳವಣಿಗೆಗೆ ಅಗತ್ಯವಾದ ಹೂಡಿಕೆಗಳನ್ನು ಮುಂದುವರಿಸುವುದಾಗಿ ಕೇಂದ್ರ ಸರ್ಕಾರ ಈ ಬಜೆಟ್ ಮೂಲಕ ಸ್ಪಷ್ಟಪಡಿಸಿದೆ.

**ರೂ. 12.2 ಲಕ್ಷ ಕೋಟಿ ಬಂಡವಾಳ ವೆಚ್ಚ :** ರಸ್ತೆ, ರೈಲು, ನಗರಾಭಿವೃದ್ಧಿ ಮತ್ತು ಲಾಜಿಸ್ಟಿಕ್ಸ್ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಮುಖ್ಯ ಬಂಡವಾಳ ವೆಚ್ಚವನ್ನು ರೂ. 12.2 ಲಕ್ಷ ಕೋಟಿಗೆ ಏರಿಸಲಾಗಿದ್ದು, ದೇಶದ ಸಾರಿಗೆ ವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ 7 ಹೈ-ಸ್ಪೀಡ್ ರೈಲು ಮಾರ್ಗಗಳ ಅಭಿವೃದ್ಧಿ ಪಡಿಸಲಾಗುವುದು ಎಂದು ಘೋಷಿಸಲಾಗಿದೆ.

**ಉದ್ಯಮ ಮತ್ತು ಮೈಕ್ರೊ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಬಲ :** ಉದ್ಯೋಗ ಸೃಷ್ಟಿಯ ಪ್ರಮುಖ ಆಧಾರವಾಗಿರುವ ಮೈಕ್ರೊ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ವಿಶೇಷ ಗಮನ ನೀಡಲಾಗಿದ್ದು, ಈ ವಲಯದ ಬೆಳವಣಿಗೆಗಾಗಿ ರೂ.10,000 ಕೋಟಿ ಮೌಲ್ಯದ ಎಸ್‌ಎಂಇ ಬೆಳವಣಿಗೆ ನಿಧಿ' ಸ್ಥಾಪಿಸುವುದಾಗಿ ಘೋಷಿಸಲಾಗಿದೆ.

**ಸೆಮಿಕಂಡಕ್ಟರ್, ರೇರ್ ಅರ್ಥ್ ಮತ್ತು ಬಯೋ ಫಾರ್ಮಾ ಯೋಜನೆಗಳು :** ದೇಶೀಯ ಉತ್ಪಾದನೆ ಮತ್ತು ತಂತ್ರಜ್ಞಾನ ಸ್ವಾವಲಂಬನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಭಾರತೀಯ ಸೆಮಿಕಂಡಕ್ಟರ್ ಮಿಷನ್ 2.0, ಅಪರೂಪದ ಭೂಮಿ ಕಾರಿಡಾರ್‌ಗಳು ಹಾಗೂ ಜೈವಿಕ ಔಷಧ ಶಕ್ತಿ ವಲಯ ಯೋಜನೆಗಳನ್ನು ಘೋಷಿಸಲಾಗಿದೆ. ಇವುಗಳಿಂದ ಮುಂದಿನ ವರ್ಷಗಳಲ್ಲಿ ಉದ್ಯೋಗ ಮತ್ತು ರಫ್ತು ಅವಕಾಶಗಳು ಹೆಚ್ಚಾಗುವ ನಿರೀಕ್ಷೆ ಹೊಂದಲಾಗಿದೆ.

**'ಭಾರತ್ ವಿಸ್ತಾರ್' ಎಐ ಆಧಾರಿತ ಯೋಜನೆ :** ಕೃಷಿ ಕ್ಷೇತ್ರಕ್ಕೆ ತಂತ್ರಜ್ಞಾನ ಆಧಾರಿತ ನೆರವು ನೀಡುವ ಉದ್ದೇಶದಿಂದ ಬಹುಭಾಷಾ ಎಐ ಆಧಾರಿತ 'ಭಾರತ್ ವಿಸ್ತಾರ್' ಯೋಜನೆ ಪರಿಚಯಿಸಲಾಗಿದೆ. ಇದರಿಂದ ರೈತರಿಗೆ ಮಾಹಿತಿ, ಮಾರುಕಟ್ಟೆ ಮತ್ತು ತಾಂತ್ರಿಕ ನೆರವು ಸುಲಭವಾಗಿ ಲಭ್ಯವಾಗಲಿದೆ ಎಂದು ಹೇಳಲಾಗಿದೆ.

**'ಭಾರತ್ ವಿಸ್ತಾರ್' ಐಐಟಿ ಕ್ರಿಯೇಟರ್ ಲ್ಯಾಬ್ಸ್ :** ಶಿಕ್ಷಣ ಕ್ಷೇತ್ರದಲ್ಲಿ 'ಭಾರತ್ ವಿಸ್ತಾರ್' ಐಐಟಿ ಕ್ರಿಯೇಟರ್ ಲ್ಯಾಬ್ಸ್, ನೂತನ ವಿನ್ಯಾಸ ಸಂಸ್ಥೆಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಯುವಕರನ್ನು ಉದ್ಯೋಗ ಯೋಗ್ಯರನ್ನಾಗಿಸುವುದೇ ಕೇಂದ್ರ ಸರ್ಕಾರದ ಗುರಿಯಾಗಿದೆ ಎಂದು ಹೇಳಲಾಗಿದೆ.

**ತೆರಿಗೆ ನೀತಿಯಲ್ಲಿ ಯಾವುದೇ ಬದಲಾವಣೆ ಇಲ್ಲ, ಹೊಸ ಕಾಯ್ದೆ ಜಾರಿ:** ಈ ಬಾರಿಯ ಬಜೆಟ್‌ನಲ್ಲಿ ಆದಾಯ ತೆರಿಗೆ ದರಗಳಲ್ಲಿ ಯಾವುದೇ ದೊಡ್ಡ ಬದಲಾವಣೆಗಳಿಲ್ಲ. ಆದರೆ ಹೊಸ ಆದಾಯ ತೆರಿಗೆ ಕಾಯ್ದೆ 2025 ಅನ್ನು ಏಪ್ರಿಲ್ 1, 2026ರಿಂದ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

**ಒಟ್ಟಾರೆ ಬಜೆಟ್‌ನಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಶಿಸ್ತಿನ ಸಮತೋಲನ:** ಒಟ್ಟಾರೆ, 2026-27ರ ಕೇಂದ್ರ ಬಜೆಟ್ ಆರ್ಥಿಕ ಬೆಳವಣಿಗೆ, ಮೂಲಸೌಕರ್ಯ ವಿಸ್ತರಣೆ, ಉದ್ಯೋಗ ಸೃಷ್ಟಿ ಮತ್ತು ತಂತ್ರಜ್ಞಾನ ಸ್ವಾವಲಂಬನೆಗೆ ಸಮತೋಲನದ ಒತ್ತು ನೀಡುವ ಬಜೆಟ್ ಆಗಿದೆ. "ವಿಕಸಿತ ಭಾರತ" ಗುರಿಯತ್ತ ಸಾಗುವ ದಾರಿಯಲ್ಲಿ ಇದು ಮಹತ್ವದ ಹೆಜ್ಜೆಯೆಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಬಜೆಟ್ ಷೇರು ಮಾರುಕಟ್ಟೆ ಭಾರೀ ಕುಸಿತ 2

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಜನರ ದಿನ ನಿತ್ಯದ ಸಂಕಷ್ಟಗಳಿಗೆ ಸ್ಪಂದಿಸದ ಕೇಂದ್ರ ಬಜೆಟ್

2026–27ರ ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮ್ ಅವರು 2026–27ನೇ ಸಾಲಿನ ಬಜೆಟ್ ಮಂಡಿಸುವ ಮೂಲಕ ದೇಶದ ಮುಂದಿನ ದಿನಗಳ ಆರ್ಥಿಕ ದೃಷ್ಟಿಕೋನವನ್ನು ಪ್ರಕಟಿಸಿದ್ದಾರೆ. ಈ ಬಜೆಟ್ 'ವಿಕಸಿತ ಭಾರತ'ದ ದೀರ್ಘಕಾಲೀನ ಕನಸನ್ನು ಹೊತ್ತುಕೊಂಡಿದೆ. ಆದರೇ ಜನಸಾಮಾನ್ಯರ ದಿನ ನಿತ್ಯದ ಸಂಕಷ್ಟಗಳಿಗೆ ಸ್ವಂದಿಸುವ ಯಾವುದೇ ಕ್ರಿಯಾ ಯೋಜನೆಗಳು, ಕಾರ್ಯಕ್ರಮಗಳು ಕಂಡುಬರುತ್ತಿಲ್ಲ ಎನ್ನುವುದು ಬಹುತೇಕರ ಅಭಿಪ್ರಾಯವಾಗಿದೆ.

ಕಾರಣ; ಪ್ರಸ್ತುತ ಆಹಾರ ಹಾಗೂ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದ್ದರೆ, ಉದ್ಯೋಗದ ಅನಿಶ್ಚಿತತೆ ಮತ್ತು ಆದಾಯ ಸ್ಥಗಿತದಿಂದ ಜನಸಾಮಾನ್ಯರು ಬಳಲುತ್ತಿದ್ದಾರೆ. ಅವರುಗಳು ಈ ಬಜೆಟ್‌ನಲ್ಲಿ ನೇರ ಪರಿಹಾರಾತ್ಮಕ ಕ್ರಮಗಳನ್ನು ನಿರೀಕ್ಷಿಸಿದ್ದರು. ಆದರೆ ಬಜೆಟ್‌ನಲ್ಲಿ ಸಬ್ಸಿಡಿ, ನೇರ ನೆರವು ಅಥವಾ ತೆರಿಗೆ ರಿಯಾಯಿತಿಗಳಿಗಿಂತ ಬಂಡವಾಳ ಹೂಡಿಕೆಯೇ ಮುಖ್ಯವಾಗಿರುವಂತಿದೆ. ಇದು ಅಗತ್ಯವಾದರೂ, ಬದುಕಿನ ಭಾರ ತಗ್ಗಿಸುವ ಕೆಲ ಉಪಕ್ರಮಗಳನ್ನು ಕೈಗೊಳ್ಳದೆ ಇರುವುದು ಜನಸಾಮಾನ್ಯರಿಗೆ ನಿರಾಸೆ ತಂದಿದೆ.

ಇನ್ನೊಂದೆಡೆ, ರೈತ ಸಮೂಹಕ್ಕೆ ಕೃಷಿ ಮೂಲಸೌಕರ್ಯ, ಡಿಜಿಟಲ್ ವ್ಯವಸ್ಥೆಗಳು ಮತ್ತು ಸಾಲ ಲಭ್ಯತೆ ಕುರಿತು ಭರವಸೆಗಳಿವೆ. ಆದರೆ ಅವರುಗಳ ಸಂಕಷ್ಟಕ್ಕೆ ಮಿಡಿಯುವ ಯಾವುದೇ ಘೋಷಣೆಗಳು ಬಜೆಟ್‌ನಲ್ಲಿ ಕಂಡುಬರುತ್ತಿಲ್ಲ. ಇದರಿಂದಾಗಿ ಹವಾಮಾನ ಬದಲಾವಣೆ ಮತ್ತು ಮಾರುಕಟ್ಟೆ ಅನಿಶ್ಚಿತತೆಯ ನಡುವೆ ರೈತರ ಭವಿಷ್ಯ ಇನ್ನೂ ಡೋಲಾಯಮಾನವಾಗಿದೆ.

ಕಾರ್ಮಿಕ ವಲಯದಲ್ಲಿ ಉದ್ಯೋಗ ಸೃಷ್ಟಿಯ ಮಾತುಗಳು ಕೇಳಿ ಬಂದರೂ, ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಉದ್ಯೋಗ ಸ್ಥಿರತೆ ಕುರಿತು ಸ್ಪಷ್ಟ ನೀತಿ ಪ್ರಕಟವಾಗಿಲ್ಲ. ಕುಶಲ ಕರ್ಮಿಗಳಿಗೆ ಕೌಶಲ್ಯ ತರಬೇತಿ ನೀಡುವ ಘೋಷಣೆಗಳು ಆಶಾವಾದ ಮೂಡಿಸಿದರೂ, ತರಬೇತಿಯ ನಂತರದ ಉದ್ಯೋಗ ಭರವಸೆ ಇಲ್ಲದಿರುವುದು ಅವರುಗಳಲ್ಲಿ ನಿರಾಸೆ ಮೂಡಿಸಿದೆ. ಮಧ್ಯಮ ವರ್ಗ ಈ ಬಜೆಟ್‌ನಲ್ಲಿ ತೆರಿಗೆ ಸಡಿಲಿಕೆ ಮತ್ತು ಉಳಿತಾಯಕ್ಕೆ ಉತ್ತೇಜನ ನಿರೀಕ್ಷಿಸಿತ್ತು. ಆದರೆ ವಾಸ್ತವದಲ್ಲಿ ದೊರೆತದ್ದು ಸಂಯಮದ ಸಂದೇಶ ಮಾತ್ರ. ದುಬಾರಿಯಾಗುತ್ತಿರುವ ಆಹಾರ, ಶಿಕ್ಷಣ, ಆರೋಗ್ಯ ಮತ್ತು ವಸತಿ ವೆಚ್ಚಗಳ ನಡುವೆ ಈ ವರ್ಗಕ್ಕೆ ಬಜೆಟ್ ಯಾವುದೇ ಭರವಸೆಯನ್ನು ನೀಡಲಾಗಿಲ್ಲ.

ಒಟ್ಟಿನಲ್ಲಿ, 2026–27ರ ಬಜೆಟ್ ಆರ್ಥಿಕ ಶಿಸ್ತು ಮತ್ತು ಬೆಳವಣಿಗೆಯ ದೃಷ್ಟಿಯಿಂದ ಸಮರ್ಥವಾಗಿದ್ದರೂ, ಜನಜೀವನದ ಸಂಕಷ್ಟಗಳಿಗೆ ತಕ್ಷಣ ಸ್ಪಂದಿಸುವ ಮಾನವೀಯ ಸ್ಪರ್ಶ ಕಡಿಮೆಯಾಗಿದೆ. ಅಭಿವೃದ್ಧಿಯ ಅಂಕಿಅಂಶಗಳು ಮಾತ್ರ ಸಾಕಾಗುವುದಿಲ್ಲ; ಅವು ಜನರ ಬದುಕಿನಲ್ಲಿ ಅನುಭವವಾಗಿ ತೋರುವವರೆಗೆ 'ವಿಕಸಿತ ಭಾರತ' ಕೇವಲ ಘೋಷಣೆಯಲ್ಲೇ ಉಳಿಯುವ ಅಪಾಯವಿದೆ.

ಹಾಗೆ ನೋಡಿದರೆ, ಈ ಬಜೆಟ್‌ನಿಂದ ಹೆಚ್ಚು ಲಾಭ ಪಡೆದ ವರ್ಗ ಎಂದರೆ ಬಂಡವಾಳ ಹೂಡಿಕೆದಾರರು, ಕೈಗಾರಿಕೋದ್ಯಮಿಗಳು ಹಾಗೂ ದೊಡ್ಡ ಕಾರ್ಪೊರೇಟ್ ವಲಯಕ್ಕೆ ಸೇರಿದವರಾಗಿದ್ದಾರೆ. ಈ ವಲಯಗಳಿಗೆ ನೀಡಿರುವ ಉತ್ತೇಜನಗಳು ಪರೋಕ್ಷವಾಗಿ ಉದ್ಯೋಗ ಸೃಷ್ಟಿಸಬಹುದಾದರೂ, ನೇರ ಆದಾಯ ಗಳಿಸುವ ಕ್ರಮಗಳಿಲ್ಲದ ಕಾರಣ ಬಜೆಟ್ ಯುವಜನರ ಪಾಲಿಗೆ ಕಹಿಯಾಗಿದೆ. ಕರ್ನಾಟಕದ ಪಾಲಿಗೆ ಎಂದಿನಂತೆ ನಿರಾಸೆ.

▸▸ ಎಚ್.ಕೆ. ಪಾಟೀಲ

## ಕೇಂದ್ರ ಬಜೆಟ್ ಷೇರು ಮಾರುಕಟ್ಟೆ ಭಾರೀ ಕುಸಿತ

**ಮುಂಬೈ:** ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಕೇಂದ್ರ ಬಜೆಟ್ ಷೇರು ಮಾರುಕಟ್ಟೆಯ ಮೇಲೆ ದೊಡ್ಡ ಮಟ್ಟದ ನಕಾರಾತ್ಮಕ ಪರಿಣಾಮ ಬೀರಿದೆ. ಬಜೆಟ್ ಹಿನ್ನೆಲೆಯಲ್ಲಿ ಭಾನುವಾರದಂದು ಷೇರು ಮಾರುಕಟ್ಟೆಯನ್ನು ತೆರೆಯಲಾಗಿತ್ತು. ಆದರೆ, ಷೇರು ಹೂಡಿಕೆದಾರರು ನಿರೀಕ್ಷೆಗಳು ತಲೆಕೆಳಗಾಗಿದ್ದು, ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣವನ್ನು ಓದಿ ಮುಗಿಸುತ್ತಿದ್ದಂತೆ ಮುಂಬೈ ಷೇರು ಮಾರುಕಟ್ಟೆ ಹಾಗೂ ರಾಷ್ಟ್ರೀಯ ಷೇರು ಸೂಚ್ಯಂಕ–ನಿಫ್ಟಿ ಭಾರೀ ಪ್ರಮಾಣದಲ್ಲಿ ಇಳಿಕೆ ದಾಖಲಿಸಿವೆ.

ಮಧ್ಯಾಹ್ನದ ವೇಳೆಗೆ ಬಿಎಸ್‌ಇ ಸೆನ್ಸೆಕ್ಸ್ 1000 ಪಾಯಿಂಟ್‌ಗಳ ಕುಸಿತದೊಂದಿಗೆ 79,955.22 ಮತ್ತು ನಿಫ್ಟಿ 330 ಪಾಯಿಂಟ್‌ಗಳ ಕುಸಿತದೊಂದಿಗೆ 24,790.65ಗೆ ತಲುಪಿತು. ಇದರ ಪರಿಣಾಮವಾಗಿ ಷೇರು ಹೂಡಿಕೆದಾರರು ಒಂದೇ ಗಂಟೆಯಲ್ಲಿ ಸುಮಾರು 9.40 ಲಕ್ಷ ಕೋಟಿ ರೂ. ಗಳಷ್ಟು ನಷ್ಟ ಅನುಭವಿಸಿದ್ದಾರೆ. ಒಂದು ಹಂತದಲ್ಲಿ ಸೆನ್ಸೆಕ್ಸ್ 2000ಕ್ಕೂ ಅಧಿಕ ಅಂಕ ಕುಸಿದು ಭಾರೀ ಆತಂಕ ಸೃಷ್ಟಿಸಿತ್ತು.

**ಹೂಡಿಕೆದಾರರಿಗೆ 9.40 ಲಕ್ಷ ಕೋಟಿ ರೂ. ನಷ್ಟ :**

ಬಿಎಸ್‌ಇಯಲ್ಲಿ ಪಟ್ಟಿ ಮಾಡಲಾದ ಎಲ್ಲಾ ಕಂಪನಿಗಳ ಮಾರುಕಟ್ಟೆ ಬಂಡವಾಳವು 9.40 ಲಕ್ಷ ಕೋಟಿ ರೂ.ಗಳಷ್ಟು ಕಡಿಮೆಯಾಗಿ 1 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ಪ್ರಮುಖವಾಗಿ ಸಾರ್ವಜನಿಕ ವಲಯದ ಲೋಹ, ಹಣಕಾಸು ಮತ್ತು ಗ್ರಾಹಕ ಷೇರುಗಳು ಅತಿ ಹೆಚ್ಚು ನಷ್ಟ ಅನುಭವಿಸಿವೆ. ಆದರೆ ಬೆರಳೆಣಿಕೆಯಷ್ಟು ರಕ್ಷಣಾತ್ಮಕ ಹೂಡಿಕೆಯ ಷೇರುಗಳು ಮಾತ್ರ ಕೊಂಚ ಏರಿಕೆ ದಾಖಲಿಸಿವೆ.

**ಷೇರು ಮಾರುಕಟ್ಟೆ ಕುಸಿತಕ್ಕೆ ಕಾರಣವೇನು?**

ಬಂಡವಾಳ ವೆಚ್ಚಕ್ಕೆ ಹಣ ಒದಗಿಸಲು ಆದಾಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಕೆಲವು ಈಕ್ವಿಟಿ ವಹಿವಾಟುಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಿದೆ. ಭಾನುವಾರ ಸಂಸತ್ತಿನಲ್ಲಿ ಮಂಡಿಸಲಾದ ಬಜೆಟ್ ಪ್ರಕಾರ, ಸರ್ಕಾರವು ಈಕ್ವಿಟಿ ಫ್ಯೂಚರ್ಸ್ ಮೇಲಿನ ಭದ್ರತಾ ವಹಿವಾಟು ತೆರಿಗೆಯನ್ನು 0.02% ನಿಂದ 0.05% ಗೆ ಹೆಚ್ಚಿಸಿದೆ. ಆಪ್ಷನ್ಸ್ ಪ್ರೀಮಿಯಂ ಮತ್ತು ಆಪ್ಷನ್ಸ್ ಎಕ್ಸರ್ಸೈಜ್ ಮೇಲಿನ ತೆರಿಗೆಯನ್ನು ಶೇ 0.1ರಿಂದ ಶೇ1ಕ್ಕೆ ಹೆಚ್ಚಿಸಲಾಗಿದೆ. ಜೊತೆಗೆ ಈ ಬಾರಿ ಸರ್ಕಾರ ತೆರಿಗೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ. ಜೊತೆಗೆ ತೆರಿಗೆದಾರರಿಗೆ ಹೊಸ ಕೊಡುಗೆಗಳನ್ನು ಘೋಷಿಸಿಲ್ಲ. ಇದು ಷೇರು ಮಾರುಕಟ್ಟೆಯ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

# ಕರ್ನಾಟಕದ ತೆರಿಗೆ ಪಾಲು ಕನಿಷ್ಟ ಶೇ.4.7 ಮರು ನಿಗದಿಯಾಗಲಿ : ಮುಖ್ಯಮಂತ್ರಿ ಸಿದ್ದರಾಮಯ್ಯ



**ಬೆಂಗಳೂರು** : ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಸಿಗಬೇಕಾದ ನ್ಯಾಯಯುತ ತೆರಿಗೆ ಪಾಲು, ಪ್ರಾಕೃತಿಕ ವಿಕೋಪ ಪರಿಹಾರ ನಿಧಿ ಹಾಗೂ ವಿಶೇಷ ಅನುದಾನ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು 16ನೇ ಹಣಕಾಸು ಆಯೋಗದ ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದು, ಈ ಕುರಿತು 'ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ' ಎಂಬ ಹೆಸರಿನಲ್ಲಿ ಅಭಿಯಾನವನ್ನು ಆರಂಭಿಸಿದ್ದಾರೆ. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಅವರು, ಹಲವು ಬೇಡಿಕೆಗಳನ್ನು ಮಂಡಿಸಿದ್ದಾರೆ.

ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ನೋಡಿದರೆ, 14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ವರದಿಯಿಂದಾಗಿ ಶೇ.23ರಷ್ಟು ತೆರಿಗೆ ಪಾಲು ನೇರವಾಗಿ ಕಡಿಮೆಯಾಯಿತು. 14ನೇ ಹಣಕಾಸು ಆಯೋಗವು ಶೇ.4.71ರಷ್ಟು ಪಾಲನ್ನು ನಮಗೆ ಒದಗಿಸಿತ್ತು. 15ನೇ ಹಣಕಾಸು ಆಯೋಗವು ಇದನ್ನು ಶೇ.3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ 100 ರೂಪಾಯಿಯಲ್ಲಿ ಮೊದಲು ಕರ್ನಾಟಕಕ್ಕೆ ರೂ.4.71 ಸಿಗುತ್ತಿದ್ದರೆ, 15ನೇ ಆಯೋಗವು ಅದನ್ನು ರೂ.3.64ಗೆ ಇಳಿಸಿತು. ಇದರಿಂದ ರಾಜ್ಯಕ್ಕೆ ನೇರವಾಗಿ ಸುಮಾರು ರೂ.80 ಸಾವಿರ ಕೋಟಿಯಷ್ಟು ಬೃಹತ್ ಪ್ರಮಾಣದ ತೆರಿಗೆ ಪಾಲು ಸಿಗದೆ ಅನ್ಯಾಯವಾಯಿತು.

ದೇಶದ ಆರ್ಥಿಕ ಶಕ್ತಿಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕ ತಲಾವಾರು ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದೆ. ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ರೂ.4.5 ಲಕ್ಷ ಕೋಟಿಯಿಂದ ರೂ.5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ರಾಜ್ಯದ ಒಟ್ಟಾರೆ ಆಯವ್ಯಯದಲ್ಲಿ ಇಡೀ ದೇಶದಲ್ಲಿಯೇ ಕೇಂದ್ರದಿಂದ ಅತ್ಯಂತ ಕಡಿಮೆ ತೆರಿಗೆ ಪಾಲು ಮತ್ತು ಅನುದಾನ ಪಡೆಯುವ ರಾಜ್ಯವೂ ಕರ್ನಾಟಕವೇ ಆಗಿರುವುದು ದುರದೃಷ್ಟಕರ. ಈ ಹಿನ್ನೆಲೆಯಲ್ಲಿ ನಮಗೆ 14ನೇ ಹಣಕಾಸು ಆಯೋಗವು ನೀಡಿದ್ದ ಶೇ.4.71ರಷ್ಟು ಪಾಲನ್ನು ಕೊಟ್ಟರೆ ಮಾತ್ರ ನಾವು ನಿಟ್ಟುಸಿರು ಬಿಡುವಂತಾಗುತ್ತದೆ. ಅದಕ್ಕಿಂತ ಹೆಚ್ಚು ಕೊಟ್ಟರೆ ಮಾತ್ರ ನೈಜವಾಗಿ ನ್ಯಾಯ ಸಿಕ್ಕಂತಾಗುತ್ತದೆ ಎಂದು ಹೇಳಿದ್ದಾರೆ. ರಾಜ್ಯಕ್ಕೆ 15ನೇ ಹಣಕಾಸು ಆಯೋಗದಲ್ಲಿ ಸಮಸ್ಯೆಯಾಗಲು ಆಯೋಗವು ಅಳವಡಿಸಿಕೊಂಡ ಸೂತ್ರಗಳಲ್ಲಿಯೇ ದೋಷಗಳಿದ್ದವು. ಆದಾಯ ದೂರ ಅಥವಾ ಇನ್ ಕಂ ಡಿಸ್ಟೆನ್ಸ್ ಎಂಬ ಸೂತ್ರಕ್ಕೆ ಶೇ. 45ರಷ್ಟು ಪ್ರಾಮುಖ್ಯ ನೀಡಿದ್ದು ಮುಖ್ಯ ಕಾರಣ. ಕರ್ನಾಟಕದ ಜನರ ತಲಾ ಆದಾಯ ಹೆಚ್ಚಿದೆಯೆಂದು ನಮಗೆ ಕಡಿಮೆ ಪಾಲನ್ನು ಹಂಚಿಕೆ ಮಾಡಲಾಯಿತು. ತಲಾ ಆದಾಯ ಎನ್ನುವುದು ಆರ್ಥಿಕತೆಯನ್ನು ಅಳೆಯುವ ಮಾನದಂಡಗಳಲ್ಲೊಂದಷ್ಟೆ, ಅದೇ ಮುಖ್ಯವಲ್ಲ. ರಾಜ್ಯದ ಉತ್ಪನ್ನವನ್ನು ಶ್ರೀಮಂತರು ಮತ್ತು ಬಡವರನ್ನೆಲ್ಲ ಒಂದೇ ಗುಂಪಿಗೆ ಸೇರಿಸಿ ಎಲ್ಲರಿಗೂ ಸಮಾನವಾಗಿ ವಿಭಾಗಿಸಲಾಗುತ್ತದೆ. ಇದರಿಂದ ಬರುವ ಮೊತ್ತವನ್ನು ತಲಾ ಆದಾಯ ಎನ್ನಲಾಗುತ್ತದೆ.

2014ರಿಂದ ಈಚೆಗೆ ಆಡಳಿತ ನಡೆಸುತ್ತಿರುವ ಕೇಂದ್ರ ಸರ್ಕಾರವು ಅಳವಡಿಸಿಕೊಂಡ ನೀತಿಗಳಿಂದಾಗಿ ಸಂಪತ್ತು ಕೆಲವೇ ಜನರ ಬಳಿ ಕೇಂದ್ರೀಕೃತ ವಾಗುತ್ತಿದೆ. ಜಾಗತಿಕ ಅಸಮಾನತಾ ಸೂಚ್ಯಂಕದ ಅಧ್ಯಯನಗಳ ಪ್ರಕಾರ, ಶೇ.50ರಷ್ಟಿರುವ ಬಡ ಜನರು ಕೇವಲ ಶೇ.15ರಷ್ಟು ಆದಾಯ ಗಳಿಸುತ್ತಿದ್ದಾರೆ. ಶೇ.10ರಷ್ಟಿರುವ ಶ್ರೀಮಂತರು ಶೇ.58ಕ್ಕೂ ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ. ಈ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ಅಳತೆ ಮಾಡಿ ಅದನ್ನು ಆದಾಯ ದೂರ ಎಂಬ ಸೂತ್ರಕ್ಕೆ ತಂದು ಅನುದಾನಗಳನ್ನು ಖೋತಾ ಮಾಡುವುದು ಅನ್ಯಾಯವಾಗುತ್ತದೆ ಎಂದು ಹೇಳಿದ್ದೇವೆ. ಕಲ್ಯಾಣ ಕರ್ನಾಟಕವೂ ಸೇರಿದಂತೆ ಕೆಲವು ಜಿಲ್ಲೆಗಳ ತಲಾ ಆದಾಯ ದೇಶದ ಸರಾಸರಿ ತಲಾ ಆದಾಯಕ್ಕಿಂತ ಕಡಿಮೆ ಇದೆ ಎಂಬುದನ್ನು 16ನೇ ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಆದ್ದರಿಂದ ಈ ಸೂತ್ರವನ್ನು ಶೇ.45ರ ಬದಲು ಶೇ.25ಕ್ಕೆ ಇಳಿಸಬೇಕು ಎಂದು ಒತ್ತಾಯಿಸಿದ್ದಾರೆ.

15ನೇ ಹಣಕಾಸು ಆಯೋಗವು ಜನಸಂಖ್ಯೆಯನ್ನು 1971ರ ಬದಲಾಗಿ 2011 ಅನ್ನು ಆಧಾರವಾಗಿರಿಸಿಕೊಂಡ ಕಾರಣದಿಂದಲೂ ನಮಗೆ ತೀವ್ರ ರೂಪದ ಅನ್ಯಾಯವಾಗಿದೆ. ಜನಸಂಖ್ಯಾ ನಿಯಂತ್ರಣದ ಮೂಲಕ ಅಭಿವೃದ್ಧಿ ಸಾಧಿಸುತ್ತಿರುವ ರಾಜ್ಯಗಳಿಗೆ ಇದರಿಂದ ದೊಡ್ಡ ಹೊಡೆತ ಬಿದ್ದಿತು. ಜನಸಂಖ್ಯಾ ನಿಯಂತ್ರಣ ಸಾಧಿಸಿದ ರಾಜ್ಯಗಳಿಗೆ ಉತ್ತೇಜನ ನೀಡುವ ಬದಲು ಘೋರ ಶಿಕ್ಷೆ ನೀಡಲಾಯಿತು. ಇದನ್ನು ಸರಿಪಡಿಸಬೇಕಾದರೆ 1971ರ ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ಇಟ್ಟುಕೊಳ್ಳಬೇಕು ಹಾಗೂ ಜನಸಂಖ್ಯೆಗೆ ನಿಗದಿಪಡಿಸಿರುವ ಪ್ರಾಮುಖ್ಯವನ್ನು ವೈಜ್ಞಾನಿಕವಾಗಿ ಪರಿಗಣಿಸಬೇಕು.

ವಿಕೇಂದ್ರೀಕರಣದಲ್ಲಿ ಉತ್ತಮ ಸಾಧನೆ ಮಾಡಿದ ರಾಜ್ಯಗಳನ್ನು ಪ್ರೋತ್ಸಾಹಿಸಲು ಪಂಚಾಯತ್ ಅಧಿಕಾರ ಹಂಚಿಕೆ ಸೂಚ್ಯಂಕವನ್ನು ಅಳವಡಿಸಿಕೊಳ್ಳಬೇಕು. ಹಿಂದಿನ ಹಣಕಾಸು ಆಯೋಗಗಳು ಜನಸಂಖ್ಯೆಗೆ ಶೇ.90 ಹಾಗೂ ವಿಸ್ತೀರ್ಣಕ್ಕೆ ಶೇ.10ರಷ್ಟು ಮಾನದಂಡಗಳನ್ನು ಅಳವಡಿಸಿಕೊಂಡ ಕಾರಣ, ವಿಕೇಂದ್ರೀಕರಣ ಸಾಧಿಸಿದ ರಾಜ್ಯಗಳಿಗೆ ಅನ್ಯಾಯವಾಯಿತು. ಆದ್ದರಿಂದ ಜನಸಂಖ್ಯೆಗೆ ಶೇ.60, ಭೌಗೋಳಿಕ ವಿಸ್ತೀರ್ಣಕ್ಕೆ ಶೇ. 20 ಮತ್ತು ಅಧಿಕಾರ ಹಂಚಿಕೆ ಸೂಚ್ಯಂಕಕ್ಕೆ ಶೇ.20ರಷ್ಟು ಮಾನದಂಡಗಳನ್ನು ನಿಗದಿಪಡಿಸಬೇಕು.

ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ 5 ವರ್ಷಗಳಲ್ಲಿ ರೂ.25 ಸಾವಿರ ಕೋಟಿಗಳನ್ನು ಮೀಸಲಿರಿಸಿದೆ. ಇದರ ಜೊತೆಗೆ ಕೇಂದ್ರ ಸರ್ಕಾರವೂ ಅಷ್ಟೇ ಮೊತ್ತವನ್ನು ಮ್ಯಾಚಿಂಗ್ ಗ್ರ್ಯಾಂಟ್ ನೀಡಬೇಕು ಹಾಗೂ ಆ ಭಾಗದ ಪರಿಸರ ಸಂರಕ್ಷಣೆ ಮತ್ತು ವಿಪತ್ತು ನಿರ್ವಹಣೆಗಾಗಿ ರೂ.10 ಸಾವಿರ ಕೋಟಿ ವಿಶೇಷ ಪ್ಯಾಕೇಜ್ ನೀಡಬೇಕು. ಪ್ರಧಾನಿ ನರೇಂದ್ರ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಒತ್ತಾಯ ಮಾಡುತ್ತಿದ್ದಂತೆಯೇ ರಾಜ್ಯಗಳಿಗೆ ಹಂಚಿಕೆ ಮಾಡುತ್ತಿರುವ ಶೇ.41ರಷ್ಟು ಹಂಚಿಕೆಯನ್ನು ಶೇ.50ಕ್ಕೆ ಏರಿಕೆ ಮಾಡಬೇಕು; ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಕೇಂದ್ರದ ಆದಾಯದ ಶೇ.5ಕ್ಕೆ ಮಾತ್ರ ಸೀಮಿತಗೊಳಿಸಿ, ಉಳಿಕೆ ಮೊತ್ತವನ್ನು ರಾಜ್ಯಗಳಿಗೆ ಹಂಚಬೇಕು ಎಂದು ಒತ್ತಾಯಿಸಿದ್ದಾರೆ.

# ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

**ಮಡಿಕೇರಿ :** ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ : 28.01.2026 ರಂದು ಮಡಿಕೇರಿಯಲ್ಲಿ ಏರ್ಪಡಿಸಲಾಗಿತ್ತು.



ಈ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರು ಹಾಗೂ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರು ಹಾಗೂ ಮಹಾಮಂಡಳದ ಪ್ರಾತಿನಿಧ್ಯ ಕ್ಷೇತ್ರದಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಎಸ್.ಬಿ.ಎಂ. ಮಂಜುರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಇತ್ತೀಚಿನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸವಿಸ್ತಾರವಾಗಿ ವಿವರಿಸಿ ಅದರಲ್ಲಿ ನಮ್ಮ ಮಹಾಮಂಡಳದ ಕಾರ್ಯ ಯೋಜನೆಗಳು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಜರುಗುತ್ತಿದ್ದು, ನಮ್ಮೆಲ್ಲರಿಗೂ ಹೆಮ್ಮೆಯಾಗಿರುತ್ತದೆ. ಮಾನ್ಯ ಶ್ರೀ ಎಚ್.ಕೆ. ಪಾಟೀಲರ ಮಾರ್ಗದರ್ಶನದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಗು ಹೋಗುಗಳನ್ನು ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಹಾಗೂ ರಿಜರ್ವ್ ಬ್ಯಾಂಕಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಪರಿಹಾರ ಕಂಡುಕೊಳ್ಳಲು ಅನುಕೂಲಕರವಾಗುತ್ತಿದೆ. ನಮ್ಮ ಮಹಾಮಂಡಳ ಪ್ರತೀವರ್ಷ ಕನಿಷ್ಠ 12 ರಿಂದ 15 ರಾಜ್ಯಮಟ್ಟದ ಕಾರ್ಯಾಗಾರಗಳನ್ನು ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ಅದೇ ರೀತಿ ವಾರ್ತಾಪತ್ರಿಕೆ, ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ, ಕಾನೂನು ಸಲಹೆ, ಪ್ರತ್ಯೇಕ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಪ್ರಕರಣಗಳ ಇತ್ಯರ್ಥ, ಬ್ಯಾಂಕುಗಳ ಸಿಬ್ಬಂದಿಗಳಿಗೆ ಡಿಪ್ಲೋಮಾ ಕೋರ್ಸ್, ಇ–ಸ್ಟ್ಯಾಂಪಿಂಗ್ ವ್ಯವಸ್ಥೆ ಇತ್ಯಾದಿಗಳನ್ನು ನಮ್ಮ ಸದಸ್ಯ ಬ್ಯಾಂಕುಗಳಿಗೆ ನಿರಂತರವಾಗಿ ಮಹಾಮಂಡಳ ಸೇವೆಯನ್ನು ನೀಡುತ್ತಾ ಬರಲಾಗುತ್ತಿದೆ. ಪ್ರಯುಕ್ತ, ತಾವೆಲ್ಲರೂ ಮಹಾಮಂಡಳದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಾಮಂಡಳದ ನಿರ್ದೇಶಕಿ ಶ್ರೀಮತಿ ಮಲ್ಲಮ್ಮಾ ಶಿ.ಯಾಳವಾರ ರವರು ಮಾತನಾಡಿ ಆರ್‌ಬಿಐ ದಿಂದ ದಿನನಿತ್ಯ ಸುತ್ತೋಲೆಗಳು ಮತ್ತು








ಪಾಲಿಸಿಗಳು ಬರುತ್ತಿದ್ದು, ಅದರಲ್ಲಿ ಆಡಳಿತ ಮಂಡಳಿಯ ನಿರ್ದೇಶಕರ ಅವಧಿ ಬಗ್ಗೆ ಗೊಂದಲವುಂಟಾಗುತ್ತಿದ್ದು, ಈ ಬಗ್ಗೆ ಹಿಂದಿನ ಮಹಾಮಂಡಳದ ಆಡಳಿತ ಮಂಡಳಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರೊಂದಿಗೆ ಸುದೀರ್ಘವಾಗಿ ಚರ್ಚಿಸಲಾಗಿ ಈ ಗೊಂದಲ ಪರಿಹರಿಸುವ ಬಗ್ಗೆ ರಾಷ್ಟ್ರೀಯ ಮಹಾಮಂಡಳದ ಮೂಲಕ ಕೇಂದ್ರ ಹಾಗೂ ಆರ್‌ಬಿಐ ಮೇಲೆ ಒತ್ತಡ ಹಾಕಿ ಪ್ರಯತ್ನಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಹೇಳಿರುವುದನ್ನು ತಮಗೆ ತಿಳಿಯಪಡಿಸುತ್ತೇನೆ.

ಮಹಾಮಂಡಳದ ನಿರ್ದೇಶಕರಾದ ಶ್ರೀ ಎಂ.ಆರ್. ವೆಂಕಟೇಶ್‌ರವರು ಮಾತನಾಡಿ ಮಹಾರಾಷ್ಟ್ರದ ನಂತರ ನಮ್ಮ ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಸಂಖ್ಯೆಯಲ್ಲಿ 2ನೇ ಸ್ಥಾನವಿದ್ದರೂ, ಶಾಖೆಗಳ ಸಂಖ್ಯೆ ಕಡಿಮೆ ಇದ್ದು, ಅದರಲ್ಲಿ ವಿಶೇಷವಾಗಿ ಮಲ್ಟಿ ಸ್ಟೇಟ್ / ಷೆಡ್ಯೂಲ್ ಬ್ಯಾಂಕುಗಳು ನಮ್ಮ ರಾಜ್ಯದಲ್ಲಿ ಒಂದು ಇರುವುದಿಲ್ಲ. ಈಗ ನಾವೆಲ್ಲರೂ ನಮ್ಮ ಹೊರ ರಾಜ್ಯಗಳಲ್ಲಿ ನಮ್ಮ ಬ್ಯಾಂಕುಗಳನ್ನು ಪ್ರಾರಂಭಿಸಿ, ನಮ್ಮ ದುಡಿಯುವ ಬಂಡವಾಳ ಹಾಗೂ ಠೇವಣಾತಿ ಹೆಚ್ಚಿಸುವಲ್ಲಿ ನಾವುಗಳು ಉತ್ತಮ ಹೆಜ್ಜೆ ಇಡಬೇಕಾಗುತ್ತದೆಯೆಂದು ಅದರ ಜೊತೆಗೆ ಇನ್ನೂ ಹೆಚ್ಚಿನ ಬೆಳವಣಿಗೆ ಸಾಧಿಸಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಸಭೆಗೆ ತಿಳಿಸಿದರು.

ಮಹಾಮಂಡಳದ ನಿರ್ದೇಶಕರಾದ ಶ್ರೀ ಹೆಚ್. ಜಯಪ್ರಕಾಶ್ ಕೆದ್ಲಾಯ್‌ರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳು ಇದ್ದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅದರಲ್ಲಿ ವಿಶೇಷವಾಗಿ ತಂತ್ರಜ್ಞಾನಗಳ ಬಳಕೆ ಪ್ರಮುಖವಾಗಿರುತ್ತದೆ. ಈ ಹೊಸ ತಂತ್ರಾಂಶಗಳನ್ನು ನಮ್ಮ ಬ್ಯಾಂಕುಗಳು ಅಳವಡಿಸಿಕೊಂಡು ಈಗೀನ ಹೊಸ ಪೀಳಿಗೆಗೆ ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಒದಗಿಸಿದರೆ ಮಾತ್ರ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಈ ಕ್ಷೇತ್ರದಲ್ಲಿ ಉಳಿಯಲು ಸಾಧ್ಯವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಈ ವಿಚಾರ ಸಂಕಿರಣದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಂ.ಕೆ. ಪಟ್ಟಣಶೆಟ್ಟಿಯವರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಈ ಒಂದು ದಿನದ ವಿಚಾರ ಸಂಕಿರಣದಲ್ಲಿ ಸಹಕಾರಿ





ಕಾಯ್ದೆ, ಆಡಳಿತ ಮಂಡಳಿ ಜವಾಬ್ದಾರಿ ಹಾಗೂ ಕರ್ತವ್ಯಗಳ ಬಗ್ಗೆ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಎಚ್.ಎಸ್. ನಾಗರಾಜಯ್ಯರವರು ಉಪನ್ಯಾಸ ನೀಡಿದರು.

ಅಪೆಕ್ಸ್ ಬ್ಯಾಂಕಿನ ಹಿರಿಯ ಅಧಿಕಾರಿಯಾಗಿ ಸ್ವಯಂ ನಿವೃತ್ತಿ ಪಡೆದ ಶ್ರೀ ಎಸ್.ಜಿ. ಕುಲಕರ್ಣಿರವರು ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನ ಹಾಗೂ ಸುತ್ತೋಲೆಗಳ ಬಗ್ಗೆ ಹಾಗೂ ಅದರಲ್ಲಿ ವಿಶೇಷವಾಗಿ ಹೊಸ ತಂತ್ರಾಂಶಗಳನ್ನು ಅಳವಡಿಸುವ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಮಹಾಮಂಡಳದ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಮುಖ್ಯ ಅತಿಥಿಗಳನ್ನು ಮತ್ತು ಪ್ರತಿನಿಧಿಗಳನ್ನು ಪ್ರಾರಂಭದಲ್ಲಿ ಸ್ವಾಗತಿಸಿ, ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ 14 ಜಿಲ್ಲೆಗಳಿಂದ 30 ಬ್ಯಾಂಕುಗಳಿಂದ 140ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.





# ಎಟಿಎಂಗಳಲ್ಲಿ ಸಿಗಲಿವೆ ರೂ.10, 20, 50 ನೋಟು



**ನವದೆಹಲಿ :** ಇದುವರೆಗೆ ಎಟಿಎಂ ಯಂತ್ರಗಳಿಂದ ಕೇವಲ 100, 200 ಅಥವಾ 500 ರೂ.ಗಳ ನೋಟುಗಳು ಮಾತ್ರ ಲಭ್ಯವಾಗುತ್ತಿದ್ದವು.ಇನ್ನು ಮುಂದೆ 10, 20 ಮತ್ತು 50 ರೂ.ಗಳ ನೋಟುಗಳೂ ಎಟಿಎಂನಲ್ಲಿ ಲಭ್ಯವಾಗಲಿವೆ. ಹಲವು ಬ್ಯಾಂಕುಗಳು ಈಗಾಗಲೇ ತಮ್ಮ ಎಟಿಎಂ ಯಂತ್ರಗಳಲ್ಲಿ ಈ ಬದಲಾವಣೆ ತರಲು ತಾಂತ್ರಿಕ ಸಿದ್ಧತೆಗಳನ್ನು ಆರಂಭಿಸಿವೆ. ವಿಶೇಷವಾಗಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಣ್ಣ ನೋಟುಗಳ ಬೇಡಿಕೆ ಹೆಚ್ಚಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದಾಗಿ ಚಿಲ್ಲರೆಗಾಗಿ ಜನರು ಪರದಾಡುವುದು ತಪ್ಪಲಿದೆ. ಡಿಜಿಟಲ್ ಪಾವತಿಗಳ ಯುಗದಲ್ಲೂ ದೈನಂದಿನ ಸಣ್ಣಪುಟ್ಟ ವ್ಯವಹಾರಗಳಿಗೆ ನಗದು ಹಣದ ಅನಿವಾರ್ಯತೆ ಇರುವುದರಿಂದ, ಈ ಹೊಸ ಉಪಕ್ರಮದಿಂದ ಸಾಮಾನ್ಯ ಜನರಿಗೆ ಮತ್ತು ಸಣ್ಣ ವ್ಯಾಪಾರಿಗಳಿಗೆ ಸಹಾಯವಾಗಲಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇತ್ತೀಚೆಗೆ ಹೊರಡಿಸಿದ ಮಾರ್ಗಸೂಚಿಯಂತೆ, ದೇಶಾದ್ಯಂತ ಇರುವ ಎಟಿಎಂಗಳಲ್ಲಿ ಸಣ್ಣ ಮುಖಬೆಲೆಯ ನೋಟುಗಳ ಲಭ್ಯತೆಯನ್ನು ಹೆಚ್ಚಿಸಲು ಬ್ಯಾಂಕುಗಳಿಗೆ ಸೂಚನೆ ನೀಡಲಾಗಿದೆ. ಅದರ ಭಾಗವಾಗಿ ಈ ಹೊಸ ತಂತ್ರಜ್ಞಾನದ ಯಂತ್ರಗಳನ್ನು ಪರಿಚಯಿಸಲಾಗುತ್ತಿದೆ.

# ಕ್ರೆಡಿಟ್ ಕಾರ್ಡ್ ಬಳಕೆ ಅರಿತರೆ ಆರ್ಥಿಕ ಭದ್ರತೆ




ಹಣಕಾಸು ಸಂಸ್ಥೆಗಳು ನೀಡುವ ಕ್ರೆಡಿಟ್ ಕಾರ್ಡ್‌ಗಳು ಬಳಕೆದಾರರಿಗೆ ಆರ್ಥಿಕ ಅನುಕೂಲ ಕಲ್ಪಿಸುವುದಲ್ಲದೆ, ಅಗತ್ಯ ಸಂದರ್ಭಗಳಲ್ಲಿ ಹಣಕಾಸಿನ ಭದ್ರತೆ ನೀಡುತ್ತವೆ. ಜೊತೆಗೆ ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕೊಳ್ಳಲು ನೆರವಾಗುತ್ತವೆ. ರಿವಾರ್ಡ್ ಪಾಯಿಂಟ್‌ಗಳು, ಕ್ಯಾಶ್‌ಬ್ಯಾಕ್, ಪ್ರಯಾಣದ ಪ್ರಯೋಜನಗಳ ಜೊತೆಗೆ ಅನಿರೀಕ್ಷಿತ ವೆಚ್ಚಗಳನ್ನು ನಿರ್ವಹಿಸಲು ಬಳಕೆದಾರರಿಗೆ ಸಹಾಯ ಮಾಡುತ್ತವೆ.

2024–25ರ ಆರ್ಥಿಕ ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಬಳಕೆಗೆ ಸಂಬಂಧಿಸಿದಂತೆ 50,811 ದೂರುಗಳು ದಾಖಲಾಗಿವೆ. 2023–24ಕ್ಕೆ ಹೋಲಿಸಿದರೆ ದೂರುಗಳ ಸಂಖ್ಯೆಯಲ್ಲಿ ಶೇ.20ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಖಾಸಗಿ ಬ್ಯಾಂಕ್‌ಗಳು ನೀಡಿದ ಕ್ರೆಡಿಟ್‌ಕಾರ್ಡ್‌ಗೆ ಸಂಬಂಧಿಸಿದ ದೂರುಗಳು ಅಧಿಕ ಎಂದು ಆರ್‌ಬಿಐ ಒಂಬುಡ್ಸ್‌ಮನ್ ವರದಿ ತಿಳಿಸಿದೆ.

ಒಬ್ಬ ವ್ಯಕ್ತಿ ಎಷ್ಟು ಬೇಕಾದರೂ ಕ್ರೆಡಿಟ್ ಕಾರ್ಡ್ ಹೊಂದಬಹುದು. ಕ್ರೆಡಿಟ್ ಕಾರ್ಡ್‌ಗಳಿಂದ ಅನುಕೂಲ ಇರುವಷ್ಟೇ, ಆ ಕಾರ್ಡ್ ಸರಿಯಾಗಿ ಬಳಕೆ ಮಾಡಿಕೊಳ್ಳದಿದ್ದರೆ ಅಷ್ಟೇ ಸಮಸ್ಯೆ ಇದೆ. ಕ್ರೆಡಿಟ್ ಕಾರ್ಡ್ ಸೂಕ್ತ ಬಳಕೆಯಿಂದ ಆಗುವ ಪ್ರಯೋಜನ ಮತ್ತು ಅದನ್ನು ಅತಿಯಾಗಿ ಬಳಸುವುದರಿಂದ ಆಗುವ ಸಮಸ್ಯೆಗಳ ಬಗ್ಗೆ ತಿಳಿಯುವುದು ಅಗತ್ಯ.

### ಕ್ರೆಡಿಟ್‌ಕಾರ್ಡ್ ಅನುಕೂಲ

- ಕ್ರೆಡಿಟ್ ಕಾರ್ಡ್ ವ್ಯಕ್ತಿಯ ಖರ್ಚು ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- ಕೈಯಲ್ಲಿ ಹಣವಿಲ್ಲದಿದ್ದರೂ, ಕಾರ್ಡ್ ಬಳಸಿ ಹಣ ಪಡೆದು ಕೊಳ್ಳಬಹುದು.
- ಕ್ರೆಡಿಟ್ ಕಾರ್ಡ್‌ನ ಸರಿಯಾದ ಬಳಕೆಯು ಕ್ರೆಡಿಟ್ ಅಂಕವನ್ನು ಸುಧಾರಿಸುತ್ತದೆ.
- ಕ್ರೆಡಿಟ್ ಕಾರ್ಡ್ ಬಳಸಿ ಖರೀದಿ ಮಾಡಿದಾಗ ರಿವಾರ್ಡ್ ಪಾಯಿಂಟ್‌ಗಳು ಲಭಿಸುತ್ತವೆ. ಮತ್ತೊಮ್ಮೆ ಕಾರ್ಡ್ ಬಳಸುವಾಗ ಈ ಪಾಯಿಂಟ್ಸ್ ಬಳಸಿ, ಹಣ ಉಳಿಸಬಹುದು.
- ಕ್ರೆಡಿಟ್ ಕಾರ್ಡ್ ಬಳಸಿ ಯಾವುದಾದರೂ ವಸ್ತು ಖರೀದಿಸಿದರೆ, ಖರೀದಿಸಿದ ದಿನದಿಂದ ಬಿಲ್ ಪಾವತಿ ಮಾಡಲು 45 ದಿನದವರೆಗೆ ಅವಕಾಶ ಸಿಗುತ್ತದೆ.

### ಬಳಸುವಾಗ ಎಚ್ಚರಿಕೆ

- ಸೂಕ್ತವಾಗಿ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸದಿದ್ದರೆ ಸಾಲದ ಕೂಪಕ್ಕೆ ಸಿಲುಕಬಹುದು.
- ಕಾರ್ಡ್‌ಗಳು ವಿಧಿಸುವ ವಾರ್ಷಿಕ ಶುಲ್ಕ, ಬಡ್ಡಿ, ದಂಡ ಪಾವತಿ ಹೆಚ್ಚಿರುತ್ತದೆ.
- ಸಮಯಕ್ಕೆ ಸರಿಯಾಗಿ ಬಿಲ್ ಮೊತ್ತ ಪಾವತಿಸದಿದ್ದರೆ ಹೆಚ್ಚಿನ ಸಾಲದ ಹೊರೆ ಬೀಳುತ್ತದೆ.
- ಕ್ರೆಡಿಟ್ ಕಾರ್ಡ್ ಬಳಸಿ ನಗದು ಹಣ ಪಡೆಯುವುದು ಹೆಚ್ಚು ವೆಚ್ಚದಾಯಕ.
- ಕ್ರೆಡಿಟ್ ಕಾರ್ಡ್‌ಗಳ ಅಧಿಕ ಬಳಕೆಯಿಂದ ಕ್ರೆಡಿಟ್ ಸ್ಕೋರ್ ಮೇಲೆ ಕೆಟ್ಟ ಪರಿಣಾಮ.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಭಾರತೀಯ ರಿಜರ್ವ್ ಬ್ಯಾಂಕು ಜನವರಿ 22, 2026ರಂದು ಸಿ.ಆರ್.ಆರ್ ಬಗ್ಗೆ ತಿದ್ದುಪಡಿ ನಿರ್ದೇಶನ ಹೊರಡಿಸಿದೆ. ಸಿ.ಆರ್.ಆರ್‌ನ್ನು ಲೆಕ್ಕಹಾಕುವಲ್ಲಿ ನಮಗೆ ಈ ಕೆಳಗಿನ ಸಂಶಯಗಳು ಬರುತ್ತಿವೆ.**

1) ಕೈಯಲ್ಲಿರುವ ನಗದು ಸಿ.ಆರ್.ಆರ್ ಎಂದು ಪರಿಗಣಿಸಲ್ಪಡುವುದೇ?

2) ಫಾರ್ಮ್–Iರಲ್ಲಿ IDBIಯ ಹೆಸರನ್ನು ತೆಗೆದು ಹಾಕಲು ಹೇಳಲಾಗಿದೆ. ಹಾಗಾಗಿ ನಮ್ಮ ಬ್ಯಾಂಕು ಐ.ಡಿ.ಬಿ.ಐ. ಬ್ಯಾಂಕಿನ ಚಾಲ್ತಿ ಖಾತೆಯಲ್ಲಿ ಇಟ್ಟ ಮೊತ್ತ ಸಿ.ಆರ್.ಆರ್.ಗೆ ಪರಿಗಣಿಸಲಾಗುವುದೇ?

**– ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು**

**ಉತ್ತರ:** ಭಾರತೀಯ ರಿಸರ್ವ್ ಬ್ಯಾಂಕಿನ ಜನವರಿ 22, 2026ರ ತಿದ್ದುಪಡಿ ನಿರ್ದೇಶನಗಳ ಪ್ರಕಾರ, ನಾನ್–ಶೆಡ್ಯೂಲ್ಡ್ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಿಸಿದಂತೆ CRR (Cash Reserve Ratio) ನಿಯಮಗಳು ಈ ಕೆಳಗಿನಂತಿವೆ :

ಒಂದು ನಾನ್–ಶೆಡ್ಯೂಲ್ಡ್ ಪಟ್ಟಣ ಸಹಕಾರಿ ಬ್ಯಾಂಕ್ ತನ್ನ ಒಟ್ಟು NDTL (Net Demand and Time Liabilities)ನ ನಿಗದಿತ ಶೇಕಡಾವಾರು ಹಣವನ್ನು ಈ ಕೆಳಗಿನ ರೂಪದಲ್ಲಿ ಕಾಯ್ದಿರಿಸಬೇಕಾಗುತ್ತದೆ:

**1 ಕೈಯಲ್ಲಿರುವ ನಗದು (Cash in hand)**

- ಶಾಖೆಗಳು, ATMಗಳು, ಕ್ಯಾಶ್ ಡೆಪಾಸಿಟ್ ಮೆಷಿನ್‌ಗಳು ಮತ್ತು ಟ್ರಾನ್ಸಿಟ್ ಕ್ಯಾಶ್‌ನಲ್ಲಿ ಇರುವ ರೂಪಾಯಿ ನೋಟುಗಳು ಮತ್ತು ನಾಣ್ಯಗಳು.

2 ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ನೊಂದಿಗಿನ ಶೇಖರಣೆಗಳು (Balances with RBI)

3 ಕರೆಂಟ್ ಅಕೌಂಟ್‌ಗಳಲ್ಲಿ ನೆಟ್ ಶೇಖರಣೆಗಳು (Net balances in current accounts)

- **ವ್ಯಾಖ್ಯಾನ :** UCBಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಾರ್ವಜನಿಕ ವಲಯದ ಬ್ಯಾಂಕ್‌ಗಳು (ಕರೆಸ್ಪಾಂಡಿಂಗ್ ನ್ಯೂ ಬ್ಯಾಂಕ್‌ಗಳು) ಅಥವಾ IDBI ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಇಟ್ಟಿರುವ ಕರೆಂಟ್ ಅಕೌಂಟ್‌ಗಳಲ್ಲಿ ಇರುವ ಕ್ರೆಡಿಟ್ ಬ್ಯಾಲೆನ್ಸ್‌ಗಳ ಮೊತ್ತ. ಈ ಬ್ಯಾಂಕುಗಳು ನಿಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದರೆ, ಆ ಮೊತ್ತವನ್ನು ಕಳೆಯಬೇಕು. ಈ ಸಾಧ್ಯತೆ ತುಂಬ ವಿರಳ.

4 ರಾಜ್ಯ ಸಹಕಾರಿ ಬ್ಯಾಂಕಿನೊಂದಿಗಿನ ಶೇಖರಣೆಗಳು (Balances with State Co-operative Bank)

5 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನೊಂದಿಗಿನ ಶೇಖರಣೆಗಳು (Balances with District Central Co-operative Bank)

ಐ.ಡಿ.ಬಿ.ಐ. ಬಹಳ ಹಿಂದೆಯೇ ಐ.ಡಿ.ಬಿ.ಐ ಬ್ಯಾಂಕಿನೊಂದಿಗೆ ವಿಲೀನ ವಾಗಿರುವುದರಿಂದ ಐ.ಡಿ.ಬಿ.ಐ.ನ ಹೆಸರನ್ನು ಫಾರ್ಮ್ Iರಿಂದ ತೆಗೆಯಲಾಗಿದೆ. ಐ.ಡಿ.ಬಿ.ಐ. ಬ್ಯಾಂಕಿನ ಚಾಲ್ತಿ ಖಾತೆಯಲ್ಲಿರುವ ಮೊತ್ತ ಸಿ.ಆರ್.ಆರ್.ಗೆ ಪರಿಗಣಿಸಲ್ಪಡುವುದು.

## ಭಾವಪೂರ್ಣ ಶ್ರದ್ಧಾಂಜಲಿ



**ಬೆಂಗಳೂರು:** ಶ್ರೀ ಬನಶಂಕರಿ ಮಹಿಳಾ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ವಿ. ರವರು ದಿನಾಂಕ : 29.01.2026ರಂದು ನಿಧನ ಹೊಂದಿರುತ್ತಾರೆ. ಶ್ರೀಮತಿ ಶಶಿಕಲಾ ವಿ. ರವರು ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಮತ್ತು ಅಧ್ಯಕ್ಷರಾಗಿ ಕಳೆದ 28 ವರ್ಷಗಳ ಕಾಲ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರು. ಶಶಿಕಲಾ ವಿ. ರವರ ನಿಧನಕ್ಕೆ ಮಹಾಮಂಡಳದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ಎಟಿಎಂನಲ್ಲಿ ನಗದು ಹಿಂತೆಗೆತ : ದೇಶದಲ್ಲಿ ಕರ್ನಾಟಕ ನಂ.1 ಸ್ಥಾನ



**ನವದೆಹಲಿ :** ಎಟಿಎಂಗಳಲ್ಲಿ ನಗದು ಹಿಂತೆಗೆತದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ. 2025ರಲ್ಲಿ ಪ್ರತಿ ಎಟಿಎಂ ನಿಂದ ಸರಾಸರಿ ರೂ. 1.73 ಕೋಟಿ ಹಿಂತೆಗೆದುಕೊಳ್ಳಲಾಗಿದೆ ಎಂದು ವರದಿಯೊಂದು ಹೇಳಿದೆ. ದೇಶದಲ್ಲಿ 73,000 ಎಟಿಎಂಗಳನ್ನು ನಿರ್ವಹಿಸುವ ಕಂಪನಿಯೊಂದು ವರದಿ ಸಿದ್ಧಪಡಿಸಿದೆ.

ಈ ಪೈಕಿ ಕರ್ನಾಟಕದ ಸರಾಸರಿ ರೂ. 1.73 ಕೋಟಿ ವಿತ್‌ಡ್ರಾವಲ್ ಇದ್ದರೆ, ಜಮ್ಮು–ಕಾಶ್ಮೀರದಲ್ಲಿ ಅತಿ ಕನಿಷ್ಠ 83 ಲಕ್ಷ ರೂ. ವಿತ್‌ಡ್ರಾವಲ್ ಆಗಿದೆ. ಇದನ್ನು ಹೊರತುಪಡಿಸಿ ದೇಶದ ಸರಾಸರಿಯಲ್ಲಿ ಪ್ರತಿ ಎಟಿಎಂನಿಂದ 2025ರಲ್ಲಿ 1.21 ಕೋಟಿ ರೂ. ಹಣ ಹೊರಹೋಗಿದೆ. 2024ರಲ್ಲಿ ಇದರ ಪ್ರಮಾಣ ರೂ. 1.30 ಕೋಟಿ ಇತ್ತು ಎಂದು ವರದಿ ಹೇಳಿದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬೆಂಗಳೂರಿನ ಸುಶೀಲಮ್ಮ 15 ವರ್ಷಗಳ ಕಾಲ ಕಾರ್ಖಾನೆಯಲ್ಲಿ ಕೆಲಸ ಮಾಡಿ ನಂತರ ಕೆಲಸ ತೊರೆದು, 1975ರಲ್ಲಿ ಕೇವಲ 15 ರೂಪಾಯಿಗಳೊಂದಿಗೆ ಸುಮಂಗಲಿ ಸೇವಾ ಆಶ್ರಮವನ್ನು ಸ್ಥಾಪಿಸಿದರು. ವರ್ಷಗಳಲ್ಲಿ, ಅವರ ಸಂಸ್ಥೆಯು ಸಮಗ್ರ ಸಾಮಾಜಿಕ ಸೇವೆ ವಿಸ್ತರಿಸುವ ಮೂಲಕ ಹೆಣ್ಣುಮಕ್ಕಳಿಗಾಗಿ ಕನ್ನಡ ಮಾಧ್ಯಮ ಶಾಲೆ, ವೃದ್ಧ ಮಹಿಳೆಯರಿಗೆ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿದರು. ಇವರ ಸೇವೆಗೆ ಈ ಬಾರಿಯ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಒಲಿದು ಬಂದಿದೆ.
- ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆ ಪಡೆಯುವವರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಈ ಆಸ್ಪತ್ರೆಯಲ್ಲಿರುವ ಟ್ರಾನ್ಸ್‌ಜೆಂಡರ್ ಕ್ಲಿನಿಕ್‌ಗೆ ವರ್ಷಕ್ಕೆ ಸರಾಸರಿ 300ಕ್ಕೂ ಹೆಚ್ಚು 20 ರಿಂದ 30 ವರ್ಷದೊಳಗಿನ ಯುವಜನತೆಯೇ ಬರುತ್ತಿದ್ದಾರೆ. ಹುಡುಗಿಯಿಂದ ಹುಡುಗನಾಗಿ ಬದಲಾಗಲು ಬಯಸಿದರೆ, ಅವರಿಗೆ ಪುರುಷ ಹಾರ್ಮೋನುಗಳನ್ನು ನೀಡಲಾಗುತ್ತದೆ ಅದೇ ರೀತಿ, ಹುಡುಗ ಹುಡುಗಿಯಾಗಿ ಬದಲಾಗುವ ಪ್ರಕ್ರಿಯೆಯಲ್ಲಿ, ಸ್ತ್ರೀ ಹಾರ್ಮೋನುಗಳ ನೀಡಲಾಗುತ್ತದೆ. ಇದು ಅವರುಗಳ ದೇಹ ರಚನೆಯನ್ನು ಬದಲಾಯಿಸುತ್ತದೆ.
- ಅಮೆರಿಕದ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಕಳೆದುಕೊಂಡ ನಂತರ, ಬಿಹಾರ ಮೂಲದ ಪ್ರಭಾಕರ್ ಪ್ರಸಾದ್ ಅವರು ಲಾಸ್ ಏಂಜಲೀಸ್‌ನ ಬೀದಿಗಳಲ್ಲಿ ಚಹಾ ತಯಾರಿಸಿ ಮಾರಲಾಂಭಿಸಿದರು. ಅವರು ಚಹಾ ಮಾರಾಟ ಮಾಡುವ ಮೂಲಕ ದಿನಕ್ಕೆ 341 ಡಾಲರ್ ಗಳಿಸುತ್ತಿದ್ದಾರೆ. ಭಾರತೀಯ ರೂಪಾಯಿಯಲ್ಲಿ ಲೆಕ್ಕ ಹಾಕಿದರೆ ದಿನಕ್ಕೆ 31,000 ರೂಪಾಯಿಗಳಿಗಿಂತ ಹೆಚ್ಚು.
- ಮಧ್ಯ ಆಫ್ರಿಕಾದ ದೇಶವಾದ ಪೂರ್ವ ಕಾಂಗೋ ಗಣರಾಜ್ಯದ ಕೋಲ್ಟಾನ್ ಗಣಿಯಲ್ಲಿ ಭೂಕುಸಿತ ಸಂಭವಿಸಿ 200ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ. ಮಳೆಗಾಲದ ತೇವಾಂಶದಿಂದಾಗಿ ಈ ದುರಂತ ಸಂಭವಿಸಿದ್ದು, ಗಣಿಗಾರರು, ಮಕ್ಕಳು ಮತ್ತು ಮಹಿಳೆಯರು ಮೃತಪಟ್ಟಿದ್ದಾರೆ. ಭೂಕುಸಿತ ಪ್ರದೇಶದಲ್ಲಿ ಮಣ್ಣಿನ ಅವಶೇಷಗಳಡಿ ಇನ್ನು, ಹಲವರು ಇರುವ ಶಂಕೆಯಿದ್ದು, ಸಾವಿನ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆಯಿದೆ.
- ಇತ್ತೀಚಿಗೆ ವಿಮಾನ ಅಪಘಾತದಲ್ಲಿ ನಿಧನರಾದ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ಮಹಾರಾಷ್ಟ್ರದ ಮೊದಲ ಮಹಿಳಾ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

## ಓದುಗರ ಅನಿಸಿಕೆ...



**ಅರ್ಥಪೂರ್ಣವಾಗಿದೆ :** ನಮ್ಮ ಸಹಕಾರ ಬ್ಯಾಂಕುಗಳು ಉದ್ಯೋಗ ಸೃಷ್ಟಿಸುವಂತ ಸಾಲಗಳಿಗೆ ಆದ್ಯತೆ ನೀಡಬೇಕು. ಉದ್ಯೋಗ ಸೃಷ್ಟಿಸುವವರಿಗೆ ಸಾಲ ನೀಡಿದಲ್ಲಿ ಮುಂದಿನ ದಿನಗಳಲ್ಲಿ ಬ್ಯಾಂಕಿನ ಆರ್ಥಿಕ ಪ್ರಗತಿಗೆ ಹಾಗೂ ಸಮಾಜದ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಶ್ರೀ ಎಚ್.ಕೆ. ಪಾಟೀಲ್ ಅವರು ಕಳೆದ ವಾರ ನಡೆದ ಸಮಾರಂಭವೊಂದರಲ್ಲಿ ಸಲಹೆ ನೀಡಿರುವುದು ಅರ್ಥಪೂರ್ಣವಾಗಿದೆ.

**▸▸ ಬಸವರಾಜ ಹೂಗಾರ, ಬೀದರ್**

**ಚೇತರಿಕೆ ಹಾದಿಯೇ ಕಾಣದಾಗಿದೆ :** ಇತ್ತೀಚಿನ ದಿನಗಳಲ್ಲಿ ಅಮೆರಿಕ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ಭಾರಿ ಪ್ರಮಾಣದಲ್ಲಿ ಕುಸಿಯುತ್ತಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ನಿರಂತರವಾಗಿ ತಮ್ಮ ಷೇರುಗಳನ್ನು ಮಾರಾಟ ಮಾಡುತ್ತಿರುವುದು ಮತ್ತು ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ಅನಿಶ್ಚಿತತೆಯೇ ಮುಖ್ಯ ಕಾರಣವಾಗಿದೆ. ಇಂದು ರೂಪಾಯಿಯು ಏಷ್ಯಾದ ದುರ್ಬಲ ಕರೆನ್ಸಿಗಳಲ್ಲಿ ಒಂದಾಗಿದ್ದು, ಚೇತರಿಕೆ ಹಾದಿಯೇ ಕಾಣದಾಗಿದೆ.

**▸▸ ಪಿ. ಅನಂತನಾರಾಯಣ, ಕೋಲಾರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.